

# ಶೆಟ್ಟಿಹಳ್ಳಿಯ ಚರ್ಚಿನ ವಿದಾಯದ ದಿನಗಳು

ಗೋಥಿಕ್ ಶೈಲಿಯ ಈ ಭವ್ಯ ಕ್ರೈಸ್ತ ದೇವಾಲಯ ಮುಳುಗುವುದನ್ನು ನೋಡುತ್ತಾ ಕುಳಿತುಕೊಳ್ಳುವುದು ನಿಜಕ್ಕೂ ನೋವಿನ ಸಂಗತಿಯೇ.

■ ಚಿತ್ರ –ಬರಹ :
**ಕೆ.ಪಿ. ಸತ್ಯನಾರಾಯಣ**





ಮುಳುಗಡೆಯಾಗುವ ಪ್ರದೇಶಗಳಲ್ಲಿ ಜನವಸತಿ, ಕೃಷಿ ಭೂಮಿ ಇತ್ಯಾದಿ ಕಳೆದುಕೊಳ್ಳುವುದು ಅನಿವಾರ್ಯವೇ. ಜನರನ್ನು ಸ್ಥಳಾಂತರಿಸಬಹುದು, ಹೊಸ ಜಮೀನಿನಲ್ಲಿ ಕೃಷಿ ಮಾಡಬಹುದು. ಆದರೆ ಮುಳುಗಡೆಯಾಗುವ ಐತಿಹಾಸಿಕ ಮಹತ್ವದ ಕಟ್ಟಡಗಳನ್ನು ಏನು ಮಾಡುವುದು?

ಹಾಸನ ಜಿಲ್ಲೆಯ ಶೆಟ್ಟಿಹಳ್ಳಿ ಎಂಬಲ್ಲಿ ಚರ್ಚ್‌ನ ಅಳಿದುಳಿದಿರುವ ಅವಶೇಷಗಳನ್ನು ನೋಡಿದಾಗ ಇಂತಹ ಸಂಕಟವನ್ನು ನಾನು ಅನುಭವಿಸಿದೆ. 'ಜಪಮಾಲೆ ರಾಣಿಯ ದೇವಾಲಯ' ಎಂದು ಕರೆಯಲ್ಪಡುತ್ತಿದ್ದ ಈ ಚರ್ಚ್, ಗೊರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟೆ ಕಟ್ಟಿದಾಗ ಅದರ ಹಿನ್ನೀರಿನಲ್ಲಿ ಮೂರೂವರೆ ದಶಕಗಳಿಂದ ಮುಳುಗೇಳುತ್ತಾ, ವರ್ಷವರ್ಷಕ್ಕೂ ಶಿಥಿಲಗೊಳ್ಳುತ್ತಾ ತನ್ನ ಅಂತಿಮ ದಿನಗಳನ್ನು ಎಣಿಸುತ್ತಿದೆ.

ಮೈಸೂರಿನ ಸುತ್ತಮುತ್ತ ಧರ್ಮಪ್ರಚಾರ ಮಾಡುತ್ತಿದ್ದ ಫ್ರೆಂಚ್ ಪಾದ್ರಿ ಅಬುದುಬೆ ಎಂಬವರು 1820ರಲ್ಲಿ ಕೆಲವು ಕ್ರೈಸ್ತ ಕುಟುಂಬಗಳೊಡನೆ ಹಾಸನ ಜಿಲ್ಲೆಗೆ ಬಂದು ಶೆಟ್ಟಿಹಳ್ಳಿಯಲ್ಲಿ ನೆಲೆಸಿದರು. ನಂತರದ ದಿನಗಳಲ್ಲಿ ಶೆಟ್ಟಿಹಳ್ಳಿ ಮತ್ತು ಹತ್ತಿರದ ಕೆಲವು ಗ್ರಾಮಗಳ ಜನರು ಕ್ರೈಸ್ತ ಧರ್ಮದ ಅನುಯಾಯಿಗಳಾದರು. ಫ್ರೆಂಚ್ ಮಿಷನರಿಗಳು ಈ ಗ್ರಾಮಕ್ಕೆ ಭೇಟಿ ನೀಡುತ್ತಿದ್ದು, 1860ರಲ್ಲಿ ಭವ್ಯವಾದ ಚರ್ಚೊಂದನ್ನು ಇಲ್ಲಿ ಕಟ್ಟಿದರು.

ಗೋಥಿಕ್ (ಜರ್ಮನ್ ಹಾಗೂ ಫ್ರೆಂಚ್ ವಾಸ್ತುಶಿಲ್ಪದ ಅಂಶಗಳನ್ನು ಸೇರಿಸಿದ ಒಂದು ವಿಶಿಷ್ಟ ಶೈಲಿ) ಶೈಲಿಯಲ್ಲಿ ಕಟ್ಟಲಾದ ಈ ಚರ್ಚಿನಲ್ಲಿ ಹಿಂದೂ ಶೈಲಿಯ ಒಳಾಂಗಣವಿತ್ತು. ಹಲವು ಕಮಾನುಗಳು ಹಾಗೂ ದೈತ್ಯಾಕಾರದ ಕಂಬಗಳು ಈ ದೇವಾಲಯದ ವಿಶೇಷತೆಯಾಗಿದ್ದವು. ಮಣ್ಣು, ಸುಣ್ಣ ಮತ್ತು ಕೋಳಿಮೊಟ್ಟೆ ಬಳಸಿ ಮಾಡಿದ ಇಟ್ಟಿಗೆಗಳು, ಹಾಗೂ ಗಾರೆಯಿಂದಲೇ ಈ ಕಟ್ಟಡವನ್ನು ಸಂಪೂರ್ಣವಾಗಿ ಕಟ್ಟಲಾಗಿದೆ. ಎರಡು ಘಂಟೆಗೋಪುರಗಳಿದ್ದು ಅವುಗಳಿಂದ ಹೊರಟ ನಿನಾದ ಬಹಳ ದೂರದವರೆಗೆ ಕೇಳಿಬರುತ್ತಿತ್ತೆಂದು ಹೇಳಲಾಗುತ್ತದೆ. ಗಾಜಿನ ದೀಪಗಳು, ಅನೇಕ ಸುಂದರ ವಿಗ್ರಹಗಳು ಇಲ್ಲಿದ್ದವೆಂದು ತಿಳಿದುಬರುತ್ತದೆ.

ಗೋಡೆಗಳಲ್ಲಿ ಗೋಪುರಗಳಲ್ಲಿ ಹೂಬಳ್ಳಿಯ ಅಲಂಕಾರಿಕ ಚಿತ್ತಾರವನ್ನು ಈಗಲೂ ಕಾಣಬಹುದು. ದೊಡ್ಡದಾದ ಸಭಾಂಗಣ, ವಿಶಿಷ್ಟವಾದ ವೇದಿಕೆ ಇಲ್ಲಿದ್ದವು. ನಾಲ್ಕೂ ದಿಕ್ಕಿನಲ್ಲಿ ಪ್ರವೇಶದ್ವಾರಗಳಿದ್ದವು.

ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಈ ದೇವಾಲಯ ಕ್ರೈಸ್ತಬಾಂಧವರ ಆರಾಧನಾ ಕೇಂದ್ರವಾಗಿ ಬಳಕೆಯಲ್ಲಿತ್ತು. 1976ರಲ್ಲಿ ಗೊರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ನಿರ್ಮಾಣವಾಯಿತು. ಕಟ್ಟೆಯಲ್ಲಿ ನೀರು ಶೇಖರವಾಗುತ್ತಾ ಹೋದಂತೆ 1978ರಿಂದ ವರ್ಷದಲ್ಲಿ ಏಳೆಂಟು ತಿಂಗಳ ಕಾಲ ಚರ್ಚಿನ ಬಹುಭಾಗ ನೀರಿನಲ್ಲಿ ಮುಳುಗಿರುತ್ತದೆ. ಡ್ಯಾಮ್ ಭರ್ತಿಯಾದಾಗ ಈ ಚರ್ಚು ಮುಕ್ಕಾಲು ಭಾಗ ನೀರಿನಲ್ಲಿರುತ್ತದೆ. ಘಂಟೆಗೋಪುರ ಹಾಗೂ ಕೆಲವು ಮೇಲ್ಮಟ್ಟದ ರಚನೆಗಳು ನೀರಿನಿಂದ ಮೇಲೆ ಗೋಚರಿಸುತ್ತವೆ. ಬೇಸಿಗೆಯಲ್ಲಿ ನೀರು ಕಡಿಮೆಯಾದಾಗ ಇದರ ಪೂರ್ಣ ನೋಟವನ್ನು ಕಾಣಬಹುದು. ನೀರಿನಲ್ಲಿ ಅರ್ಧಂಬರ್ಧ ಮುಳುಗಿದ್ದಾಗಲೂ ಇದರ ಆಕರ್ಷಣೆಯೇನೂ ಕಡಿಮೆಯಿಲ್ಲ. ಹಾಗಾಗಿ ವರ್ಷದ ಎಲ್ಲಾ ದಿನಗಳಲ್ಲೂ ಇದೊಂದು ಪ್ರೇಕ್ಷಣೀಯ ಸ್ಥಳವಾಗಿದೆ.

ಊರು ಮುಳುಗಡೆಯಾದಾಗ ಹುಟ್ಟಿದ ಹೊಸ ವಸತಿ ಪ್ರದೇಶ ಜ್ಯೋತಿನಗರದಲ್ಲಿ ಹೊಸ ಚರ್ಚ್ ನಿರ್ಮಾಣವಾಗಿದೆ. ಯಾವುದೇ ವಿಶೇಷತೆಯಿಲ್ಲದ ಮಾಮೂಲು ಕಾಂಕ್ರೀಟ್ ಕಟ್ಟಡವದು. ಹಳೆಯ ಚರ್ಚು ಚೆನ್ನಾಗಿದ್ದಾಗಿನ ಒಂದು ಛಾಯಾಚಿತ್ರವಾದರೂ ಅಲ್ಲಿರಬಹುದೆಂಬ ನಿರೀಕ್ಷೆಯಿಂದ ಹೋದಾಗ ನಿರಾಸೆಯೇ ಕಾದಿತ್ತು. ಒಂದು ವರ್ಣಚಿತ್ರ ಅಲ್ಲಿದೆಯಾದರೂ ಅದು ಹಿಂದಿನ ಚರ್ಚಿನ ಭವ್ಯತೆಯನ್ನು ಬಿಂಬಿಸುವುದಿಲ್ಲ. ವರ್ಷವರ್ಷಕ್ಕೂ ಶಿಥಿಲವಾಗುತ್ತಿರುವ ಈ ಭವ್ಯ ದೇವಾಲಯವನ್ನು ಉಳಿಸಿಕೊಳ್ಳಬಹುದ್ದಿತ್ತೆಂದು ಈ ಚರ್ಚನ್ನು ನೋಡಿದಾಗಲೆಲ್ಲಾ ಅನ್ನಿಸಿದ್ದಿದೆ.

ಡ್ಯಾಮ್‌ನಲ್ಲಿ ಸಂಪೂರ್ಣ ನೀರಿದ್ದಾಗಲೂ ಈ ಕಟ್ಟಡ ಸುಮಾರು ಹದಿನೈದು ಅಡಿಗಳಷ್ಟು ಮಾತ್ರ ಮುಳುಗಿರುತ್ತದೆ, ಮತ್ತು ಇದು ಇರುವ ಪ್ರದೇಶ ಡ್ಯಾಮ್‌ನಿಂದ ಮೂರ್ನಾಲ್ಕು ಕಿಲೋಮೀಟರ್ ದೂರವಿರುವ ಹಿನ್ನೀರಿನ ಕೊನೆಯ ಭಾಗ. ಚರ್ಚಿನ ಹಿಂಭಾಗ ಎತ್ತರದ ಪ್ರದೇಶವಾಗಿದ್ದು, ಅಲ್ಲಿಂದ ಹೊಸ ಊರು ಹತ್ತಿರದಲ್ಲೇ ಇದೆ. ಹದಿನೈದಿಪ್ಪತ್ತು ಅಡಿ ಎತ್ತರದ ಒಂದು ಗೋಡೆಯನ್ನು ಈ ಕಟ್ಟಡದ ಮೂರು ಭಾಗದಲ್ಲಿ ನಿರ್ಮಿಸಿದ್ದರೆ, ಇದಕ್ಕಾಗುವ ಹಾನಿ ತಪ್ಪಿಸಬಹುದಿತ್ತು. ಒಂದು ಬಹುಮೂಲ್ಯ ಐತಿಹಾಸಿಕ ಕಟ್ಟಡ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿ ಉಳಿಸಿಕೊಳ್ಳಬಹುದಾಗಿತ್ತು.

ಅಳಿದುಳಿದಿರುವ ಈ ಭವ್ಯ ಕಟ್ಟಡದ ಅವಶೇಷಗಳನ್ನು ನೋಡಲು ಜನರ ದಂಡೇ ಇಲ್ಲಿಗೆ ಬರುತ್ತದೆ. ಎಷ್ಟೋ ಮಂದಿಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಯಾವುದೋ ಸಿನಿಮಾದ ಶೂಟಿಂಗ್ ಇಲ್ಲಿ ಆಯಿತೆಂದು ಬರುವವರೇ ಹೆಚ್ಚು. ತನ್ನ ಕೊನೆಯ ದಿನಗಳನ್ನು ಎಣಿಸುತ್ತಿರುವ ಈ ಭವ್ಯ ಕಟ್ಟಡ ಕೆಲವು ವರ್ಷಗಳಲ್ಲಿ ಸಂಪೂರ್ಣ ಮಣ್ಣಾಗುವುದು ಖಂಡಿತ. ನೋಡುತ್ತಾ ಮರುಗುವುದು ಬಿಟ್ಟರೆ ಇನ್ನೇನು ಮಾಡಲು ಸಾಧ್ಯ?

